OS 132/2020

**Witness recalled and duly sworn on**

**<u>Further Examination in Chief by: Sri  Advocate</u>**

I have produced CC of the Mutation Register pertaining to Baad-II Village with respect to entry No.A2561 and it is marked as Ex.P.1. I have produced CC of the Form No.7 and it is marked as Ex.P.2. I have produced CC of the Order in TNC.MSC.SR.230 and it is marked as Ex.P.3. I have produced CC of the Form No.10 and it is marked as Ex.P.4. I have produced CC of the Sale Deed dated 28.03.2017 and it is marked as Ex.P.5. I have produced CC of the Registered Partition Deed dated 03.03.2016 and it is marked as Ex.P.6.

**Cross Examination: D/C prays time for cross examination of PW.1. Granted.**

( Dictated in open court and typed as per the dictation)

R.O.A.C.

**Addl. Civil Judge, Kawar.**

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ದಿನಾಂಕಃ 18.03.2024.**

**(ಸಾಕ್ಷಿದಾರರರಿಗೆ ಕನ್ನಡ ಬರುತ್ತಿಲ್ಲವಾಗಿದ್ದು ಕೊಂಕಣಿ ಭಾಷೆ ಬಲ್ಲವರಾಗಿದ್ದು ಶ್ರೀ ಸಿ ಡಿ ಎನ್ ವಕೀಲರು ಸಾಕ್ಷಿ ಕೊಂಕಣಿಯಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳುವುದಾಗಿ ಪ್ರಮಾಣ ವಚನ ಸ್ವೀಕರಿಸಿ ಸಾಕ್ಷಿ ಕೊಂಕಣಿಯಲ್ಲಿ ಹೇಳಿದ ಸಾಕ್ಷ್ಯವನ್ನು ಸದ್ರಿಯವರು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದನ್ನು ರೆಕಾರ್ಡ್ ಮಾಡಿಕೊಳ್ಳಲಾಯಿತು)**

4. ಈ ದಾವೆಯನ್ನು ದಾಖಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದೇ ರೀತಿ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಷಯಗಳ ಬಗ್ಗೆಯೂ ಸಹ ನಾನೇ ಮಾಹಿತಿ ನೀಡಿರುತ್ತೇನೆ.

5. ನನಗೆ ಕನ್ನಡ ಮತ್ತು ಇಂಗ್ಲೀಷ ಓದಲು ಬರೆಯಲು ಬರುವುದಿಲ್ಲಾ ಎಂದರೆ ಸರಿ. ಮೂಲತಃ ಈ ದಾವೆಯ ಬಗ್ಗೆ ನಾನು ಯಾವ ವಕೀಲರಿಗೆ ಮಾಹಿತಿ ನೀಡಿರುತ್ತೇನೆ ಎಂದರೆ ನನಗೆ ವಕೀಲರ ಹೆಸರು ಗೊತ್ತಿಲ್ಲಾ. ನಾನು ಮೊದಲು ವಕೀಲರಿಗೆ ಮಾಹಿತಿ ನೀಡಿದ್ದು ಯಾವ ಸ್ಥಳದಲ್ಲಿ ನೀಡಿರುತ್ತೇನೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲಾ. ನನಗೆ ಮೂರು ಜನ ಮಕ್ಕಳು . ನನ್ನ ಮಕ್ಕಳ ಹೆಸರು ಸುಲಕ್ಷಾ , ಸುರೇಖಾ ಮತ್ತು ಸುಧೀರ.

6. ನನಗೆ ನನ್ನ ಕುಟುಂಬದ ವಂಶಾವಳಿ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ನನ್ನ ಕುಟುಂಬದ ಮೂಲ ಪುರುಷರು ಯಾರು ಎಂದರೆ ದಿಗಂಬರ ಎಂದು ನುಡಿಯುತ್ತಾರೆ. ದಿಗಂಬರ ಎಂದರೆ ನನ್ನ ಗಂಡನ ಹಿರಿಯ ಅಣ್ಣ ಎಂದರೆ ಸರಿ. ದಿಗಂಬರ ಅವರ ತಂದೆಯ ಹೆಸರು ಶಿವ ಏಸು ಬಾಂದೇಕರ . ಶಿವ ಏಸು ಬಾಂದೇಕರ ಇವರಿಗೆ ರಮಾಬಾಯಿ ಮತ್ತು ಶಾಂತಿ ಎನ್ನುವ ಇಬ್ಬರು ಹೆಂಡತಿಯರು ಎಂದರೆ ಸರಿ. ರಮಾಬಾಯಿ ಮೂಲಕ ಶಿವ ಏಸು ಬಾಂದೇಕರ ಇವರಿಗೆ ದಿಗಂಬರ ಮತ್ತು ರಘುವೀರ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಹಾಗೆಯೇ ಶಾಂತಿಯ ಮೂಲಕ ಶಿವ ಏಸು ಬಾಂದೇಕರ ಇವರಿಗೆ ನಾರಾಯಣ , ರಾಮದಾಸ , ಸುಲೋಚನಾ, ದುರ್ಗಾಬಾಯಿ ಮತ್ತು ಲತಾಬಾಯಿ ಎನ್ನುವ 5 ಜನ ಮಕ್ಕಳೆಂದರೆ ಸರಿ. ಈ ಪ್ರಕಾರ ಶಿವ ಏಸು ಬಾಂದೇಕರ ಇವರಿಗೆ 7 ಜನ ವಾರಸುದಾರರು ಎಂದರೆ ಸರಿ. ಮೇಲೆ ಹೇಳಿದ ವಂಶಾವಳಿ ಬಗ್ಗೆ ನನ್ನ ವಕೀಲರಿಗೆ ಮಾಹಿತಿ ಕೊಟ್ಟಿರುವುದಿಲ್ಲಾ. ಈ ಬಗ್ಗೆ ನನಗೆ ತಿಳಿದಿದ್ದರೂ ಸಹ

ದುರುದ್ದೇಶಪೂರ್ವಕವಾಗಿ ನಾನು ಸದರಿ ಮಾಹಿತಿ ನೀಡಿರಲಿಲ್ಲಾ ಎಂದರೆ ಅಷ್ಟು ಮಾಹಿತಿ ಇರದೇ ಇದ್ದ ಕಾರಣ ನಾನು ಈ ಬಗ್ಗೆ ಹೇಳಿರುವುದಿಲ್ಲಾ. ಈ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ಉದ್ದೇಶಪೂರ್ವಕವಾಗಿ ಅದನ್ನು ನನ್ನ ವಾದಪತ್ರದಲ್ಲಿ ನಮೂದಿರುವುದಿಲ್ಲಾ ಎಂದರೆ ಅಷ್ಟು ಮಾಹಿತಿ ಇರದೇ ಇದ್ದ ಕಾರಣ ನಾನು ಈ ಬಗ್ಗೆ ಹೇಳಿರುವುದಿಲ್ಲಾ.

7. ದಾವಾ ಆಸ್ತಿಗಳು ಮೂಲತಃ ಶಿವ ಏಸು ಬಾಂದೇಕರ ಇವರಿಗೆ ಸೇರಿರುತ್ತವೆ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲಾ. ಶಿವ ಏಸು ಬಾಂದೇಕರ ಇವರ ಮರಣಾ ನಂತರ ಅವರಿಗೆ ಸೇರಿದ ಆಸ್ತಿಗಳು ದಿಗಂಬರ ಇವರ ಹೆಸರಿಗೆ ಅಕುಮೆ ನಾತೆಯಿಂದ ವರ್ಗಾವಣೆಗೊಂಡಿರುತ್ತವೆ ಎಂದರೆ ನನಗೆ ಮದುವೆ ಆದಾಗ ದಿಗಂಬರ ತೀರಿಕೊಂಡಿದ್ದು , ಮುಂಚೆ ನಡೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲಾ. ಶಿವ ಏಸು ಬಾಂದೇಕರ ಅವರ ಮರಣಾ ನಂತರ ಅವರ ಆಸ್ತಿಗಳು ದಿಗಂಬರ ಅವರ ಹೆಸರಿಗೆ ಅಕುಮೆ ನಾತೆಯಿಂದ ಬಂದಿರುತ್ತವೆ ಎಂದರೆ ಸದರಿ ಆಸ್ತಿಗಳು ನನ್ನ ಗಂಡನ ಹೆಸರಿಗೆ ಬಹಳ ಹಿಂದೆಯೇ ಇತ್ತು ಎಂದು ನುಡಿಯುತ್ತಾರೆ. ನನ್ನ ಗಂಡನ ಹೆಸರಿಗೆ ಸದರಿ ಆಸ್ತಿಗಳು ಹೇಗೆ ಬಂದಿರುತ್ತವೆ ಎನ್ನುವ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನಾ ಎಂದರೆ ಹಾಜರು ಪಡಿಸಿದ್ದೇನೆಂದು ನುಡಿಯುತ್ತಾರೆ. ಸದರಿ ಆಸ್ತಿಗಳು ನನ್ನ ಗಂಡನಿಗೆ ನೇರವಾಗಿ ಬಂದಿರುವುದಿಲ್ಲಾ ಎಂದರೆ ನನಗೆ ಗೊತ್ತಿಲ್ಲಾ.

**(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ದಿನಾಂಕಃ** 01.07.2024.

**(ಸಾಕ್ಷಿದಾರರರಿಗೆ ಕನ್ನಡ ಬರುತ್ತಿಲ್ಲವಾಗಿದ್ದು ಕೊಂಕಣಿ ಭಾಷೆ ಬಲ್ಲವರಾಗಿದ್ದು ಶ್ರೀಮತಿ ಎಸ್ ಪಿ ಬಿ ವಕೀಲರು ಸಾಕ್ಷಿ ಕೊಂಕಣಿಯಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳುವುದಾಗಿ ಪ್ರಮಾಣ ವಚನ ಸ್ವೀಕರಿಸಿ ಸಾಕ್ಷಿ ಕೊಂಕಣಿಯಲ್ಲಿ ಹೇಳಿದ ಸಾಕ್ಷ್ಯವನ್ನು ಸದ್ರಿಯವರು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದನ್ನು ರೆಕಾರ್ಡ್ ಮಾಡಿಕೊಳ್ಳಲಾಯಿತು)**

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಸ್ ಆರ್ ಬಿ. ವಕೀಲರಿಂದಃ**

8. ನನ್ನ ಹೆಸರು ಮನೋರಮಾ ರಘುವೀರ ಬಾಂದೇಕರ ಎಂದರೆ ಸರಿ. ನನಗೆ ಒಂದನೇ ಪ್ರತಿವಾದಿಯ ಪರಿಚಯ ಇದೆ. ನಾನು 1 ನೇ ಪ್ರತಿವಾದಿಯ ವಿರುದ್ಧ ದಾವೆಯನ್ನು ಹೂಡಿರುತ್ತೇನೆ. ನನಗೆ 2 ರಿಂದ 6 ನೇ ಪ್ರತಿವಾದಿಗಳ ಪರಿಚಯ ಇದೆ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳು ನನ್ನ ಮಕ್ಕಳು ಎಂದರೆ ಸರಿ. 4 ಮತ್ತು 5 ನೇ ಪ್ರತಿವಾದಿಗಳು ನನ್ನ ಗಂಡನ ಸಹೋದರನ ಮಕ್ಕಳು. 6 ನೇ ಪ್ರತಿವಾದಿ ನನಗೇನಾಗಬೇಕು ಎಂದರೆ ನನ್ನ ಗಂಡನ ಕಿರಿಯ ಸಹೋದರನ ಪತ್ನಿ ಎಂದು ನುಡಿಯುತ್ತಾರೆ. 7 ನೇ ಪ್ರತಿವಾದಿ ನನಗೇನಾಗಬೇಕು ಎಂದರೆ ನನ್ನ ಗಂಡನ ತಮ್ಮ ಎಂದು ನುಡಿಯುತ್ತಾರೆ. ದಿನಾಂಕಃ 03.03.2018 ರಂದು ನಾವೆಲ್ಲರೂ ವಾಂಟಣಿ ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಪ್ರತಿವಾದಿಗಳು ನನ್ನನ್ನು ಕರೆಯಿಸಿ , ನನಗೆ ಬೆದರಿಸಿ ವಾಂಟಣಿ ಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆಸ್ತಿಗಳಿಗೆ ಸಂಬಂಧಿಸಿದಂತೆ ವಾಂಟಣಿ ಮಾಡಿಕೊಳ್ಳುವ ಪೂರ್ವದಲ್ಲಿ ಆಸ್ತಿಗಳ ಸರ್ವೆಯನ್ನು ಮಾಡಿ ಅವುಗಳ ಅಳತೆಯನ್ನು ಮಾಡಬೇಕು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲಾ. ಸರ್ವೇ ಮಾಡುವ ಕಾಲಕ್ಕೆ ಸರ್ವೇಯರ ಸಂಬಂಧಿಸಿದ ಆಸ್ತಿ ಬಳಿಗೆ ಬಂದು , ಆಸ್ತಿಯನ್ನು ಅಳತೆ ಮಾಡಿ ನಮ್ಮಗಳ ಸಹಿಯನ್ನು ಪಡೆಯುತ್ತಾರೆ ಎನ್ನುವುದರ ಬಗ್ಗೆ ನನಗೆ ಮಾಹಿತಿ ಇದೆಯೇ ಎಂದರೆ ಇಲ್ಲಾ ಎಂದು ನುಡಿಯುತ್ತಾರೆ. ದಾವಾ ಜಮೀನುಗಳ ಕ್ಷೇತ್ರ ಹೇಳಬಹುದೇ ಎಂದರೆ ನನಗೆ ವಯಸ್ಸಾಗಿದೆ , ನನಗೆ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ನಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ಎಷ್ಟು ಜಮೀನುಗಳು ಇದ್ದವು ಮತ್ತು ಅವುಗಳ ಸರ್ವೇ ನಂಬರ ಬಗ್ಗೆ ನನಗೆ ಗೊತ್ತಿಲ್ಲಾ. 1 ನೇ ದಾವಾ ಆಸ್ತಿಯಲ್ಲಿ ನನಗೆ ಎಷ್ಟು ಹಕ್ಕು ಇದೆ ಎಂದು ಹೇಳಬಹುದೇ ಎಂದರೆ 5 ಗುಂಟೆ ಕ್ಷೇತ್ರಕ್ಕೆ ನನಗೆ ಹಕ್ಕಿದೆ ಎಂದು ನುಡಿಯುತ್ತಾರೆ. 1 ನೇ ದಾವಾ ಆಸ್ತಿಯನ್ನು ಸರ್ವೇ ಮಾಡಲು ಸರ್ವೇಯರ ಬಂದಿದ್ದರು

ಎಂದರೆ ನನಗೆ ಗೊತ್ತಿಲ್ಲಾ. ಸದರಿ ಸಮಯಕ್ಕೆ ಸರ್ವೇಯರ ಸರ್ವೇಯನ್ನು ಮಾಡಿ ನನ್ನ , 4 ನೇ ಪ್ರತಿವಾದಿ ಮತ್ತು 5 ನೇ ಪ್ರತಿವಾದಿಯ ಸಹಿಗಳನ್ನು ದಾಖಲೆಗಳ ಮೇಲೆ ಪಡೆದುಕೊಂಡಿದ್ದರೆಂದರೆ ನನಗೆ ಗೊತ್ತಿಲ್ಲಾ. ಸದರಿ ಸಮಯಕ್ಕೆ ನಾವೆಲ್ಲರೂ ಸ್ಥಳದಲ್ಲಿ ಹಾಜರಿದ್ದು , ಜಾಗವನ್ನು ಸರ್ವೇ ಮಾಡಿ ಅದಕ್ಕೆ ನಮ್ಮೆಲ್ಲರ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ಸರ್ವೇ ನಕಾಶೆ ತಯಾರಾದ ನಂತರ ನಾವು ಪಾಲನ್ನು ಮಾಡಿಕೊಂಡು, ನೋಂದಣಾಧಿಕಾರಿ ಕಚೇರಿಗೆ ಹೋಗಿ ವಾಂಟಣಿ ಪತ್ರವನ್ನು ನೋಂದಣಿ ಮಾಡಿರುತ್ತೇವೆ ಎಂದರೆ ನನಗೆ ಏನೂ ಗೊತ್ತಿಲ್ಲಾ. ಈ ದಾವೆಯನ್ನುಯಾವ ಕಾರಣಕ್ಕಾಗಿ ಹೂಡಿದ್ದೀರಿ ಎಂದರೆ ನನ್ನ ಗಂಡನಿಗೆ ಭೂನ್ಯಾಯ ಮಂಡಳಿಯಿಂದ ಜಮೀನು ಮಂಜೂರಾಗಿದ್ದು, ಅವರು ತೀರಿಕೊಂಡ ನಂತರ ಅವುಗಳು ನನ್ನ ಹೆಸರಿಗೆ ಬಂದಿರುತ್ತವೆ ಎಂದು ನುಡಿಯುತ್ತಾರೆ. ಮೂಲತಃ ದಾವಾ ಆಸ್ತಿಗಳು ಯಾರ ಹೆಸರಿನಲ್ಲಿದ್ದವು ಮತ್ತು ಅವುಗಳ ನನ್ನ ಗಂಡನಿಗೆ ಹೇಗೆ ಬಂದಿದ್ದವು ಎಂದು ನನಗೆ ಮಾಹಿತಿ ಇಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸದರಿ ಜಮೀನುಗಳು ನನ್ನ ಗಂಡನಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿದ್ದವು ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳಿಗೆ ಸಂಧಿಸಿದಂತೆ ಮೂಲ ಗೇಣಿದಾರ ಹಕ್ಕು ಯಾವಾಗ ಬಂದಿರುತ್ತದೆ ಮತ್ತು ಅವುಗಳ ಯಾವಾಗ ಭೂನ್ಯಾಯ ಮಂಡಳಿಯಿಂದ ಮಂಜೂರಾಗಿವೆ ಎನ್ನುವುದರ ಬಗ್ಗೆ ನನಗೆ ಮಾಹಿತಿ ಇದೆಯೇ ಎಂದರೆ ಇಲ್ಲಾ ಎಂದು ನುಡಿಯುತ್ತಾರೆ.

9. ಶಿವಾ ಏಸು ಬಾಂದೇಕರ ಯಾರು ಎಂದರೆ ಅವರು ನನ್ನ ಗಂಡನ ತಂದೆ ಎಂದು ನುಡಿಯುತ್ತಾರೆ. ಸದರಿ ಶಿವಾ ಏಸು ಬಾಂದೇಕರ ಯಾವಾಗ ತೀರಿಹೋದರೆಂಬ ಮಾಹಿತಿ ಇದೆಯೇ ಎಂದರೆ ಇಇಲ್ಲಾ ಎಂದು ನುಡಿಯುತ್ತಾರೆ. ಸದರಿ ಶಿವಾ ಏಸು ಬಾಂದೇಕರ ರವರಿಗೆ ನನ್ನ ಗಂಡ ರಘುವೀರ , ದಿಗಂಬರ , ನಾರಾಯಣ ಮತ್ತು ರಾಮದಾಸ ಎನ್ನುವ ನಾಲ್ಕು ಜನ ಗಂಡು ಮಕ್ಕಳಿದ್ದರು ಎಂದರೆ ಸರಿ. ಅದರಂತೆ ಸುಲೋಚನಾ , ದುರ್ಗಾಬಾಯಿ ಮತ್ತು ಲಲಿತಾಬಾಯಿ ಎನ್ನುವ ಮೂರು ಜನ ಹೆಣ್ಣು ಮಕ್ಕಳಿದ್ದರು ಎಂದರೆ ಸರಿ. ಸದರಿ ಶಿವಾ ಏಸು ಬಾಂದೇಕರ ರವರು ತೀರಿಹೋದ ನಂತರ ಆಸ್ತಿಗಳು ಅವರ ಮಕ್ಕಳ ಹೆಸರಿಗೆ ಸಮಾಯಕವಾಗಿ ಹಕ್ಕು ಬದಲಾವಣೆ ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲಾ. ಶಿವಾ ಏಸು ಬಾಂದೇಕರ ತೀರಿಹೋದ ನಂತರ ಆಸ್ತಿಗಳು ನನ್ನ ಗಂಡನ ಹೆಸರಿಗೆ ಅ.ಕು.ಮೆ.ನಾತೆಯಿಂದ ಬಂದಿರುತ್ತದೆ ಎಂದರೆ ಸಾಕ್ಷಿಯು

ನನ್ನ ಗಂಡ ಭೂನ್ಯಾಯ ಮಂಡಳಿಗೆ ಅರ್ಜಿಯನ್ನು ಸಲ್ಲಿಸಿದ್ದು , ಆಸ್ತಿಗಳು ಅವರಿಗೆ ಮಂಜೂರಾಗಿರುತ್ತವೆ ಎಂದು ನುಡಿಯುತ್ತಾರೆ.

**(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**
**ದಿನಾಂಕಃ 23.09.2024.**

**(ಸಾಕ್ಷಿದಾರರರಿಗೆ ಕನ್ನಡ ಬರುತ್ತಿಲ್ಲವಾಗಿದ್ದು ಕೊಂಕಣಿ ಭಾಷೆ ಬಲ್ಲವರಾಗಿದ್ದು ಶ್ರೀಮತಿ ಜಿ ಎ ಟಿ ವಕೀಲರು ಸಾಕ್ಷಿ ಕೊಂಕಣಿಯಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳುವುದಾಗಿ ಪ್ರಮಾಣ ವಚನ ಸ್ವೀಕರಿಸಿ ಸಾಕ್ಷಿ ಕೊಂಕಣಿಯಲ್ಲಿ ಹೇಳಿದ ಸಾಕ್ಷ್ಯವನ್ನು ಸದ್ರಿಯವರು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದನ್ನು ರೆಕಾರ್ಡ್ ಮಾಡಿಕೊಳ್ಳಲಾಯಿತು)**

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಸ್ ಆರ್ ಬಿ. ವಕೀಲರಿಂದಃ**

10. ನನಗೆ ಶಿವಾ ಏಸು ಬಾಂದೇಕರ ಇವರ ಪರಿಚಯ ಇರುತ್ತದೆ. ಸದರಿ ಶಿವಾ ಏಸು ಬಾಂದೇಕರ ಯಾವಾಗ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲಾ. ಸದರಿ ಶಿವಾ ಏಸು ಬಾಂದೇಕರ ಇವರಿಗೆ 4 ಜನ ಗಂಡು ಮಕ್ಕಳು ಎಂದರೆ ಸರಿ. ಅವರು ರಘುವೀರ, ದಿಗಂಬರ, ನಾರಾಯಣ ಮತ್ತು ರಾಮದಾಸ ಎಂದರೆ ಸರಿ. ಸುಲೋಚನಾ, ದುರ್ಗಾಬಾಯಿ ಮತ್ತು ಲೀಲಾಬಾಯಿ ಮೂರು ಜನ ಹೆಣ್ಣು ಮಕ್ಕಳು ಎಂದರೆ ಸರಿ. ಶಿವಾ ಏಸು ಬಾಂದೇಕರ ಮೂಲ ಗೇಣಿದಾರರಾಗಿದ್ದು , ಅವರು ತೀರಿಹೋದ ನಂತರ ಅವರ 7 ಜನ ಮಕ್ಕಳ ಹೆಸರು ದಾವಾ ಆಸ್ತಿಗೆ

ಸಂಬಂಧಿಸಿದ ದಾಖಲೆಯಲ್ಲಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲಾ. ವಾರಸಾನಾತೆಯಿಂದ ಅವರ ಮಕ್ಕಳ ಹೆಸರು ದಾಖಲೆಯಲ್ಲಿ ಬಂದಿದ್ದು ನನಗೆ ತಿಳಿದಿದ್ದರೂ ಕೂಡ ಉದ್ದೇಶಪೂರ್ವಕವಾಗಿ ನನಗೆ ಗೊತ್ತಿಲ್ಲಾ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಸಂಬಂಧಿಸಿದ ಆಸ್ತಿ ಇರುತ್ತದೆ ಎಂದು ನಾನು ವಾದ ಪತ್ರದಲ್ಲಿ ಸುಳ್ಳು ಬರೆದಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಗಂಡನಿಗೆ ಸಂಬಂಧಿಸಿರುತ್ತದೆ ಎಂದು ಹೇಳಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲಾ ಎಂದರೆ ನನಗೆ ಗೊತ್ತಿಲ್ಲಾ. ದಾವಾ ಆಸ್ತಿಗಳಲ್ಲಿ ಶಿವಾ ಏಸು ಬಾಂದೇಕರ ಅವರ ವಾರಸುದಾರರಿಗೆ ಹಕ್ಕು ಇಲ್ಲಾ ಎಂದು ನಾನು ಹೇಳುವುದಿಲ್ಲಾ , ಆದರೆ ಮೊದಲು ಏನು ಇತ್ತು ಎನ್ನುವುದರ ಬಗ್ಗೆ ನನಗೆ ಗೊತ್ತಿಲ್ಲಾ.

11. 1 ನೇ ಪ್ರತಿವಾದಿ ನನ್ನ ಮಗ ಎಂದರೆ ಸರಿ. ಈ ದಾವೆಯಲ್ಲಿ ನನ್ನ ಮಗನನ್ನು 1 ನೇ ಪ್ರತಿವಾದಿಯನ್ನಾಗಿ ಮಾಡಲಾಗಿದೆ ಎಂದರೆ ಸರಿ. ನನ್ನ ಮಗ ಹೇಳಿಕೊಟ್ಟ ಹಾಗೆ ನಾನು ಈ ದಾವೆಯಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನದ ವರೆಗೂ ನಾನು 1 ನೇ ಪ್ರತಿವಾದಿಯೊಂದಿಗೆ ವಾಸವಾಗಿದ್ದೇನೆಂದರೆ ಸರಿ. ಇಂದು ನ್ಯಾಯಾಲಯಕ್ಕೆ 1 ನೇ ಪ್ರತಿವಾದಿ ನನ್ನನ್ನು ಕರೆದುಕೊಂಡು ಬಂದಿರುತ್ತಾನೆಂದರೆ ಸರಿಯಲ್ಲ. ನನ್ನ ಮೊಮ್ಮಗ ಕರೆದುಕೊಂಡು ಬಂದಿರುತ್ತಾನೆ ಎಂದು ನುಡಿಯುತ್ತಾರೆ. 2 ಮತ್ತು 3 ನೇ ಪ್ರತಿವಾದಿ ನನ್ನ ಹೆಣ್ಣು ಮಕ್ಕಳು. 5 ನೇ ಪ್ರತಿವಾದಿ ನನ್ನ ಗಂಡನ ಹಿರಿಯ ಸಹೋದರನ ಮಗ. ಕೃಷ್ಣಾಬಾಯಿ ನನ್ನ ಗಂಡನ ಅಣ್ಣನ ಹೆಂಡತಿ. ನಳಿನಿ ನಾರಾಯಣ ಬಾಂದೇಕರ ನನ್ನ ಗಂಡನ ಕಿರಿಯ ಸಹೋದರನ ಹೆಂಡತಿ. 7 ನೇ ಪ್ರತಿವಾದಿ ನನ್ನ ಮೈದುನ. ನಾವೆಲ್ಲರೂ ಸೇರಿ ದಾವಾ ಆಸ್ತಿಗಳನ್ನು ಪಾಲು ಮಾಡಿಕೊಂಡಿದ್ದೇವೆ ಎಂದರೆ ನನಗೆ ಧಮಕಿ ಹಾಕಿ ಮಾಡಿಕೊಂಡಿರುತ್ತಾರೆ. ದಾವಾ ಆಸ್ತಿಗಳ ಮೋಜಣಿ ಮಾಡಲು ಸರ್ವೇ ಇಲಾಖೆಯಿಂದ ಅಧಿಕಾರಿಗಳು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲಾ. ಸರ್ವೇ ಮಾಡಿದ ನಂತರ ಅಧಿಕಾರಿಗಳು ನನ್ನ ಮತ್ತು ನನ್ನ ಮಕ್ಕಳ ಸಹಿ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ಸರ್ವೇ ಮಾಡುವ ಕಾಲಕ್ಕೆ ನನ್ನನ್ನು ಹಿಡಿದು 1 ರಿಂದ 7 ನೇ ಪ್ರತಿವಾದಿಗಳು ಸ್ಥಳದಲ್ಲಿ ಹಾಜರಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ನನಗೆ ತಿಳಿದಿದ್ದರೂ ಸಹ ನಾನು ಉದ್ದೇಶಪೂರ್ವಕವಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ನಕ್ಷೆ ತಯಾರಾದ ನಂತರ ನಾವೆಲ್ಲರೂ ನೋಂದಣಾಧಿಕಾರಿಗಳ ಕಚೇರಿಗೆ ಹೋಗಿ ನೋಂದಾಯಿತ ವಾಂಟಣಿ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಬನಾವಟಿ ಮಾಡಿಸಿಕೊಂಡಿರುತ್ತಾರೆ ಎಂದು

ನುಡಿಯುತ್ತಾರೆ. ಕಾನೂನುಬದ್ಧವಾಗಿ ನಾವು ದಾವಾ ಆಸ್ತಿಯನ್ನು ವಾಂಟಣಿ ಮಾಡಿಕೊಂಡಿದ್ದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರವನ್ನು ತಯಾರಿಸಲು ವಕೀಲರಿಗೆ ನನ್ನ ಮೊಮ್ಮಗ ಮಾಹಿತಿಯನ್ನು ನೀಡಿರುತ್ತಾರೆ. ಎಲ್ಲಾ ಮಾಹಿತಿಯನ್ನು ನನ್ನ ಮೊಮ್ಮಗ ಕೊಟ್ಟಿದ್ದರೂ ಸಹ ವಾದ ಪತ್ರದಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

12. ಸದರಿ ವಾಂಟಣಿ ಪತ್ರದ ಪ್ರಕಾರ 5 ನೇ ಪ್ರತಿವಾದಿಗೆ 2 ಗುಂಟೆ 4 ಆಣೆ ಜಾಗವನ್ನು ಕೊಡಲಾಗಿತ್ತು ಎಂದರೆ ಸರಿ. ಹೀಗೆ 5 ನೇ ಪ್ರತಿವಾದಿಗೆ ಬಂದ 2 ಗುಂಟೆ 4 ಆಣೆ ಜಾಗವನ್ನು ಅವರು 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 8 ನೇ ಪ್ರತಿವಾದಿ 5 ನೇ ಪ್ರತಿವಾದಿಯ ಸಂಬಂಧೀಕರು ಮತ್ತು ಹತ್ತಿರದವರು ಎಂದರೆ ಸರಿ. ಈ ಬಗ್ಗೆ ನನಗೆ ತಿಳಿದಿದ್ದರೂ ಸಹ ನಾನು ವಾದಪತ್ರದಲ್ಲಿ 8 ನೇ ಪ್ರತಿವಾದಿ ಅಪರಿಚಿತರು ಎಂದು ಬರೆದಿರುತ್ತೇನೆ ಎಂದರೆ ಮೊದಲು ನನಗೆ ತಿಳಿದಿರಲಿಲ್ಲಾ , ನಂತರದಲ್ಲಿ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ಜಮೀನನ್ನು ಖರೀದಿ ಮಾಡಿದ ನಂತರ 8 ನೇ ಪ್ರತಿವಾದಿಯೇ ವಹಿವಾಟು ಮಾಡಿಕೊಂಡು ಇದ್ದಾರೆ ಎಂದರೆ ಸರಿ. ಪಿತ್ರಾರ್ಜಿತ ಆಸ್ತಿಯಲ್ಲಿ ನನ್ನ ಗಂಡನಿಗೆ , ನನಗೆ ಮತ್ತು ನಮ್ಮ ಮಕ್ಕಳಿಗೆ ಬರಬೇಕಾದ ಪಾಲನ್ನು ವಾಂಟಣಿ ಮುಖಾಂತರ ನಮಗೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಅದು ಪಿತ್ರಾರ್ಜಿತ ಆಸ್ತಿ ಆಗಿರುವುದಿಲ್ಲಾ , ಅದನ್ನು ನನ್ನ ಗಂಡ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆಸ್ತಿಯನ್ನು ನನ್ನ ಗಂಡ ಖರೀದಿ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲಾ ಎಂದರೆ ಸರಿ.

13. ವಾಂಟಣಿ ದಸ್ತಾವೇಜನ್ನು ನನಗೆ ಮೋಸ ಮಾಡಿ ಮಾಡಿಸಿಕೊಂಡಿರುತ್ತಾರೆ ಎಂದು ನನಗೆ ಯಾವಾಗ ತಿಳಿದುಬಂದಿರುತ್ತದೆ ಎಂದರೆ ನನ್ನ ಮೊಮ್ಮಗ ಸದರಿ ದಸ್ತಾವೇಜನ್ನು ಓದಿದ ನಂತರ ನನಗೆ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಾಂಟಣಿ ಪತ್ರದ ಅಡಿಯಲ್ಲಿ ಮಾಡಿಕೊಂಡಂತಹ ವಿಭಾಗಕ್ಕೆ ನಮ್ಮ ನಮ್ಮೊಳಗೆ ಕೊಡುವ ಮತ್ತು ತಗೊಳ್ಳುವ ವ್ಯವಹಾರ ಇರುವುದಿಲ್ಲಾ ಎಂದು ವಾಂಟಣಿ ಪತ್ರದಲ್ಲಿ ಬರೆದಿರುತ್ತದೆ ಎಂದರೆ ನನಗೆ ಗೊತ್ತಿಲ್ಲಾ. ಒಬ್ಬರ ಪಾಲಿಗೆ ಬಂದ ಹಿಸ್ಸೆ ದೊಡ್ಡದು ಮತ್ತು ಇನ್ನೊಬ್ಬರ ಪಾಲಿಗೆ ಬಂದ ಹಿಸ್ಸೆ ಸಣ್ಣದು ಎಂದು ತಕರಾರು ಮಾಡುವಂತಿಲ್ಲ ಎಂದೂ ಸಹ ಬರೆದಿರುತ್ತದೆ ಎಂದರೆ ನನಗೆ ಗೊತ್ತಿಲ್ಲಾ. ನಮ್ಮ ನಮ್ಮ ಪಾಲಿಗೆ ಬಂದ ಆಸ್ತಿಯನ್ನು ಬ್ಯಾಂಕಿನಲ್ಲಿ ಇಟ್ಟು ಹಣಕಾಸು ಸೌಲಭ್ಯ ಪಡೆದುಕೊಳ್ಳಲು ಪ್ರತಿಯೊಬ್ಬರೂ

ಸ್ವತಂತ್ರರಾಗಿರುತ್ತೇವೆ ಎಂದು ಬರೆದಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲಾ. ಸಾಕ್ಷಿ ಮುಂದುವರಿದು ದಾವಾ ಆಸ್ತಿ ನಮಗೆ ಬರಬೇಕು ಎಂದು ನುಡಿಯುತ್ತಾರೆ. ನಿಪಿ.6 ನ್ನು ನಾನೇ ಹಾಜರು ಪಡಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲಾ, ನನ್ನ ಮೊಮ್ಮಗನಿಗೆ ತಿಳಿದಿರುತತ್ತದೆ, ನನಗೆ ಓದಲು ಬರೆಯಲು ಬರುವುದಿಲ್ಲಾ. ನಿಪಿ.6 ನ್ನು ನಾನೇ ಹಾಜರು ಪಡಿಸಿದ್ದರೂ ಸಹ , ಅದರ ಬಗ್ಗೆ ನನಗೆ ತಿಳಿದಿದ್ದರೂ ಸಹ , ಆ ಬಗ್ಗೆ ನನಗೆ ತಿಳಿದಿರುವುದಿಲ್ಲಾ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.6 ನ್ನು ನನಗೆ ಮೋಸ ಮಾಡಿ ಮಾಡಿಸಿಕೊಳ್ಳಲಾಗಿದೆ ಎಂದು ನಾನು ಹೇಳಿದ್ದು , ಆ ಬಗ್ಗೆ ನಾನು ಪೋಲೀಸ ಠಾಣೆಯಲ್ಲಿ ದೂರನ್ನೇನಾದರೂ ನೀಡಿದ್ದೆನೆಯೇ ಎಂದರೆ ಇಲ್ಲಾ ಎಂದು ನುಡಿಯುತ್ತಾರೆ. ವಾಂಟಣಿ ಮಾಡಿಕೊಂಡ ಬಗ್ಗೆ ನನಗೆ ತಿಳಿದಿದ್ದರೂ ಸಹ ನಾನು ಪೋಲೀಸರಲ್ಲಿ ದೂರನ್ನು ನೀಡಿರುವುದಿಲ್ಲಾ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**